



# ಕಳೆದ ದಿನಗಳ ನೆನಪುಗಳು

(ಸ್ವಾಮಿ ವಿರಜಾನಂದರ ಜೀವನ ಹಾಗೂ ಕೆಲವು ಸಮಕಾಲೀನ ಘಟನೆಗಳು)



ಮೂಲ ಬಂಗಾಳಿ: ಸ್ವಾಮಿ ಶ್ರದ್ಧಾನಂದ

ಅನುವಾದ: ಪ್ರವ್ರಾಜಿಕಾ ಯೋಗಾತ್ಮಪ್ರಾಣಾ

## ಭಾಗ ೧೩

ಒಂದು ಅನಿರ್ವಚನೀಯ ಶಾಂತಿ ಸ್ವಾಮಿ ವಿರಜಾನಂದರ ಹೃದಯ, ಮನಸ್ಸುಗಳನ್ನು ಆವರಿಸಿತು. ಕೆಲಸ, ಕಾರ್ಯದ ಬಗ್ಗೆ ಅವರಿಗಿದ್ದ ಅಲ್ಪ ಸ್ವಲ್ಪ ಉದಾಸೀನ, ದ್ವಂದ್ವ, ಸಂಕೋಚಗಳು ಸ್ವಾಮೀಜಿಯವರ ಅಮೋಘವಾದ ಆಶೀರ್ವಾದದ ಬಲದಿಂದ ಎಲ್ಲಿಗೋ ಹಾರಿಹೋದವು.

ಅಂದು ಮಠದ ಕೊಳದಲ್ಲಿ ಅಕಸ್ಮಾತ್ತಾಗಿ ದೊರಕಿದ ಅಪರೂಪದ ಸಣ್ಣ 'ಇಲಿಷ್' ಮೀನಿನಿಂದ ಅಡಿಗೆ ಮಾಡಿ, ಶ್ರೀರಾಮಕೃಷ್ಣರಿಗೆ ಅದನ್ನು ನಿವೇದಿಸಿದ ನಂತರ ಸ್ವಾಮೀಜಿ ಅದನ್ನು ಕಾಳೀಕೃಷ್ಣರಿಗೆ ತಿನ್ನಲು ಕೊಟ್ಟು, ''ಇದು ಶಕ್ತಿಯ ಪ್ರತೀಕ, ಸೇವಿಸು'' ಎಂದರು. ಸ್ವಾಮೀಜಿಯವರ ಹೃತ್ಪೂರ್ವಕ ಆಶೀರ್ವಾದಗಳನ್ನು ಪಡೆದು ಸ್ವಾಮಿ ವಿರಜಾನಂದ, ಪ್ರಕಾಶಾನಂದರಿಬ್ಬರೂ ಫೆಬ್ರವರಿ ೪ ರಂದು ಢಾಕಾಗೆ ಹೊರಟರು. ಅಲ್ಲಿಗೆ ತಲುಪಿದ ನಂತರ ಪ್ರಚಾರಕಾರ್ಯವನ್ನು ಪ್ರಾರಂಭಿಸಿದರು. ಸ್ವಲ್ಪ ದಿನಗಳ ನಂತರ ಸ್ವಾಮೀಜಿಯವರು ಸ್ವಾಮಿ ಪ್ರಕಾಶಾನಂದರಿಗೆ ಮಠಕ್ಕೆ ಹಿಂದಿರುಗಲು ಹೇಳಿ ಕಳುಹಿಸಿದರು. ಅದರಿಂದ ಸ್ವಾಮಿ ವಿರಜಾನಂದರೊಬ್ಬರೇ ಢಾಕಾದಲ್ಲಿ ಉಳಿದುಕೊಂಡು, ತಮಗೆ ಸಾಧ್ಯವಾದಷ್ಟು ಪ್ರಚಾರಕಾರ್ಯವನ್ನು ಮುಂದುವರಿಸಿದರು. ಅಲ್ಲಿ ಸೇರುತ್ತಿದ್ದ ಸಭಿಕರ ಮುಂದೆ ಅವರು, ತಾವು ಬರೆದಿದ್ದ ಪ್ರಬಂಧವನ್ನು ಓದಿ ಹೇಳುತ್ತಿದ್ದರು; ಅನಂತರ ಆ ವಿಷಯಕ್ಕೆ ಸಂಬಂಧಿಸಿದಂತೆ ಪ್ರಶ್ನೋತ್ತರ ಹಾಗೂ ಚರ್ಚೆ ನಡೆಯುತ್ತಿದ್ದವು. ಸ್ವಾಮಿ ವಿರಜಾನಂದರ ನಮ್ರ-ಮಧುರ ಸ್ವಭಾವವೂ ಪ್ರಶಾಂತ ವ್ಯಕ್ತಿತ್ವವೂ ಎಲ್ಲರ ಶ್ರದ್ಧಾಭಕ್ತಿಗಳನ್ನು ಗಳಿಸಿತ್ತು.

ಇವರು ಢಾಕಾದಲ್ಲಿದ್ದಾಗ ಸ್ವಾಮೀಜಿಯವರ ಪಾಶ್ಚಾತ್ಯ ಶಿಷ್ಯೆ ಸಂನ್ಯಾಸಿನಿ ಅಭಯಾನಂದರು ಭಾರತಕ್ಕೆ ಬಂದಿದ್ದರು. ಸ್ವಾಮೀಜಿ ಆಕೆಯನ್ನು ಢಾಕಾಗೆ ಕಳುಹಿಸಿಕೊಟ್ಟರು. ಅಲ್ಲಿ ಅವರು ಅನೇಕ ಭಾಷಣಗಳನ್ನು ಮಾಡಿದರು. ಸ್ವಾಮಿ ವಿರಜಾನಂದರು ಅಭಯಾನಂದರನ್ನು ಕರೆದುಕೊಂಡು ಢಾಕಾದಿಂದ ಮೈಮನ್‌ಸಿಂಗ್ ಹಾಗೂ ಬರಿಸಾಲ್‌ಗೂ ಹೋದರು. ಬರಿಸಾಲ್‌ನಿಂದ ಅಭಯಾನಂದರು ಕೊಲ್ಕತ್ತೆಗೆ ಹಿಂತಿರುಗಿದರು. ಸ್ವಾಮಿ ವಿರಜಾನಂದರು ಬರಿಸಾಲ್‌ನ ವಿಖ್ಯಾತ ನೇತಾರರೂ, ವಿದ್ವಾಂಸರೂ ಆದ ಅಶ್ವಿನೀಕುಮಾರ ದತ್ತ ಮಹಾಶಯರ ಮನೆಯಲ್ಲಿ ಸ್ವಲ್ಪ ದಿನ ಉಳಿದುಕೊಂಡರು. ಅನೇಕ ಯುವಕರು ಅವರ ಬಳಿಗೆ ಬಂದು, ಅವರಿಂದ ನೈತಿಕ ಹಾಗೂ ಧಾರ್ಮಿಕ ಜೀವನದ ಬಗ್ಗೆ ಉಪದೇಶ ಪಡೆಯುತ್ತಿದ್ದರು. ಸ್ವಾಮಿ ವಿರಜಾನಂದರು ೧೮೯೯ರ ಮೇ ೭ರಂದು ಬರಿಸಾಲ್‌ನಿಂದ ಮಠಕ್ಕೆ ಹಿಂದಿರುಗಿದರು.

ಇದಕ್ಕೂ ಮೊದಲು ಸ್ವಾಮಿ ಪ್ರಕಾಶಾನಂದರು ಢಾಕಾದಿಂದ ಹಿಂತಿರುಗಬೇಕೆಂದಿರುವ ಸಮಯದಲ್ಲಿ ಅವರನ್ನು ಕರೆದುಕೊಂಡು ಸ್ವಾಮಿ ವಿರಜಾನಂದರು ಶ್ರೀರಾಮಕೃಷ್ಣರ ಆದರ್ಶ ಗೃಹೀ ಭಕ್ತರಾದ ನಾಗಮಹಾಶಯರನ್ನು ಭೇಟಿಯಾಗಲು ನಾರಾಯಣ್‌ಗಂಜ್ ಸಮೀಪದ ಗ್ರಾಮವಾದ ದೇವಭೋಗಕ್ಕೆ ಹೋದರು. ನಾಗಮಹಾಶಯರು ಅವರನ್ನು ನೋಡಿ ತುಂಬ ಸಂತೋಷಪಟ್ಟು ಪರಮಾದರದಿಂದ ಸ್ವಾಗತಿಸಿದರು. ಇಬ್ಬರೂ ಅವರಿಗೆ ಪ್ರಣಾಮ ಮಾಡುವ ಮೊದಲು ಅವರೇ ಇಬ್ಬರಿಗೂ ಪ್ರಣಾಮ ಸಲ್ಲಿಸಿ, ಮಂಟಪದಲ್ಲಿ ಮಂದಲಿಗೆ ಹಾಸಿ, ಬಹಳ ಮರ್ಯಾದೆಯಿಂದ ಕುಳ್ಳಿರಿಸಿದರು. ಅದಲ್ಲದೆ, ಸ್ವತಃ ತಾವೇ ಬೇಗನೆ ತಂಬಾಕನ್ನು (ಹುಕ್ಕಾ) ಸಿದ್ಧಪಡಿಸಿ ತಂದರು. ಕಾಳೀಕೃಷ್ಣ ಹಾಗೂ ಸುಶೀಲರಿಬ್ಬರೂ ನಾಗಮಹಾಶಯರ ವಿನಯ ಹಾಗೂ ಸ್ನೇಹಾದರಗಳನ್ನು ಕಂಡು ಮೂಕವಿಸ್ಮಿತರಾದರು. ನಾಗಮಹಾಶಯರು ಅಂಗಳದಲ್ಲಿ ನಿಂತು ಗದ್ಗದ ಕಂಠದಿಂದ ತಮಗೆ ತಾವೇ, 'ಇಂದು ನನ್ನದು ಅದೆಂಥ ಭಾಗ್ಯ, ಅದೆಂಥ ಭಾಗ್ಯ! ಮಹಾಪುರುಷರು ಕೃಪೆಯಿಟ್ಟು ತಮ್ಮ ಪಾದಧೂಳಿಯನ್ನು ನನಗಿತ್ತರು' ಎಂದು ಹೇಳತೊಡಗಿದರು.

ಈ ಇಬ್ಬರು ಸಾಧುಗಳ ಆಗಮನದ ಸುದ್ದಿ ಗ್ರಾಮಕ್ಕೆಲ್ಲ ಹರಡಿ, ಭಕ್ತರೆಲ್ಲರೂ ಬರಲಾರಂಭಿಸಿದರು. ಅವರೆಲ್ಲರನ್ನೂ ನಾಗಮಹಾಶಯರು ಸ್ವಾಮಿ ವಿರಜಾನಂದರಲ್ಲಿಗೆ ಕರೆತಂದರು. ಸ್ವಾಮಿ ವಿರಜಾನಂದರು ತಂಬಾಕು ಸೇವನೆಯನ್ನು ಮುಗಿಸಿ, ಅದರ ಕೊಳವೆಯನ್ನು ಕೆಳಗಿಡುವಷ್ಟರಲ್ಲಿಯೇ ನಾಗಮಹಾಶಯರು ಪುನಃ ತುಂಬಿಸಿ ತರುತ್ತಿದ್ದರು. ಬೇಡವೆಂದರೂ ಕೇಳುತ್ತಿರಲಿಲ್ಲ. ಹುಕ್ಕಾ ಸೇದಿ ಸೇದಿ, ಕೊನೆಗೆ ಇವರ ತಲೆ ಧಿಂ ಎನ್ನತೊಡಗಿತು. ಇಬ್ಬರೂ ನೋಡುತ್ತಿದ್ದಂತೆಯೇ ಭಕ್ತರ ಮನೆಗಳಿಂದ ಮೀನು, ಮೊಸರು, ಹಾಲು, ಸಿಹಿತಿಂಡಿಗಳು ಒಂದೊಂದಾಗಿ ಬರತೊಡಗಿದವು. ನಾಗಮಹಾಶಯರ ಸಾಧ್ವಿ ಪತ್ನಿಯೊಬ್ಬರೇ ಬಂದ ಭಕ್ತರ ಊಟಕ್ಕೆಂದು ಅಡಿಗೆ ಕಾರ್ಯದಲ್ಲಿ ನಿರತರಾದರು. ಇವರಿಬ್ಬರೂ ಊಟಕ್ಕೆ ಕುಳಿತವರು ಅವಾಕ್ಕಾಗಿ ನೋಡುತ್ತಾರೆ, ವಿವಿಧ ಪದಾರ್ಥ ಮತ್ತು ಸಿಹಿತಿಂಡಿಗಳನ್ನು ತುಂಬಿದ ಪಾತ್ರೆ ಬಟ್ಟಲು



ನಾಗ ಮಹಾಶಯರು (೧೮೪೬-೧೮೯೯)

ಗಳಿಂದ ಮನೆಯ ಅರ್ಧಭಾಗ ತುಂಬಿಹೋಗಿದೆ! ನಾಗಮಹಾಶಯರು ಬಾಗಿಲ ಹೊರಗೆ ನಿಂತು ವಿಚಾರಿಸಿಕೊಳ್ಳುತ್ತಾ, 'ಇದನ್ನು ತಿನ್ನಿ, ಅದನ್ನು ತಿನ್ನಿ' ಎಂದು ಬಲವಂತ ಮಾಡುತ್ತಿದ್ದಾರೆ. ಆದರೆ ಅಷ್ಟೊಂದು ಬಗೆಯ ಭಕ್ಷ್ಯ-ಭೋಜ್ಯಗಳನ್ನು ಇನ್ನೆಷ್ಟು ತಾನೇ ತಿನ್ನಲಾದೀತು? ನಾಗಮಹಾಶಯರು ದುಃಖಿತರಾಗಿ, ''ಅಯ್ಯೋ! ನನ್ನ ದೌರ್ಭಾಗ್ಯದಿಂದಾಗಿ ಈ ಮಹಾತ್ಮರುಗಳು ಸರಿಯಾಗಿ ಊಟ ಮಾಡಲಾಗುತ್ತಿಲ್ಲ'' ಎಂದು ನೊಂದುಕೊಂಡರು.

ವಿಶ್ರಾಂತಿ ಪಡೆದು ಏಳುತ್ತಿದ್ದಂತೆಯೇ ಸಂಜೆ ಮತ್ತೆ ಭಕ್ತರು ಬರಲಾರಂಭಿಸಿದರು. ಬಹಳ ದೂರದ ಡೆಪ್ಯೂಟಿ ಮ್ಯಾಜಿಸ್ಟ್ರೇಟ್ ಒಬ್ಬ ನಾಗಮಹಾಶಯರ ಬಗ್ಗೆ ಕೇಳಿದ್ದ. ಅವರನ್ನು ನೋಡಲು ಅಕಸ್ಮಾತ್ತಾಗಿ ಅಂದೇ ಬಂದ. ಎದುರಿಗೆ ಕುಳಿತಿದ್ದ ಮಲಿನ ವಸ್ತ್ರಧಾರಿಯಾದ ದೀನ ನಾಗಮಹಾಶಯರನ್ನು ಕುರಿತು ಆತ, ''ಇಲ್ಲೊಬ್ಬರು ಮಹಾಪುರುಷರಿರುವರಂತಲ್ಲ, ಅವರೆಲ್ಲಿ?'' ಎಂದು ಪ್ರಶ್ನಿಸಿದಾಗ ನಾಗಮಹಾಶಯರು ಗಡಿಬಿಡಿಯಿಂದೆದ್ದು, ''ಬನ್ನಿ, ಬನ್ನಿ, ಮಹಾಪುರುಷರುಗಳ ದರ್ಶನ ಮಾಡಿ, ಬನ್ನಿ'' ಎಂದು ಹೇಳುತ್ತ ಆತನನ್ನು ಸ್ವಾಮಿ ವಿರಜಾನಂದರಿದ್ದಲ್ಲಿಗೆ ಕರೆದೊಯ್ದರು. ಆ ಸಭ್ಯನು ಸ್ವಲ್ಪ ಹೊತ್ತು ಅವರೊಂದಿಗೆ ಮಾತನಾಡಿ, ಅವರು ಮಠದಿಂದ ಬಂದವರೆಂದು ತಿಳಿದು, 'ಹಾಗಾದರೆ ನಾಗಮಹಾಶಯರು ಎಲ್ಲಿ?' ಎಂದು ಕೇಳಿದನು. ಇವರುಗಳು ನಾಗಮಹಾಶಯರತ್ತ ಕೈ ತೋರಿಸಿದಾಗ ಆತ ಸ್ತಂಭಿತನಾದ!

ಸಾಯಂಕಾಲ ಕೈಸಾಲೆಯಲ್ಲಿ ಸಂಕೀರ್ತನೆ ನಡೆಯುತ್ತಿತ್ತು. ನಾಗಮಹಾಶಯರು ಕೈಸಾಲೆಯ ಕೆಳಗೆ ಅಂಗಳದಲ್ಲಿ ನಿಂತು ಭಾವಪರವಶರಾಗಿ, ಕೈತಾಳ ಹಾಕುತ್ತ ಮೆಲ್ಲಗೆ ನರ್ತಿಸುತ್ತಿದ್ದರು. ಕೈಸಾಲೆಗೆ ಮಾತ್ರ ಹತ್ತಲಿಲ್ಲ. ಏಕೆಂದರೆ ಇವರ ಪಾಪ ಶರೀರದ ಗಾಳಿಯೇನಾದರೂ ಆ ಮಹಾಪುರುಷರ ದೇಹವನ್ನು ಸೋಂಕಿಬಿಟ್ಟರೆ - ಎಂದು. ರಾತ್ರಿ ಕೂಡ ಮೊದಲಿನಂತೆಯೇ ಭಾರೀ ಔತಣದ ಏರ್ಪಾಡು ನಡೆಯುತ್ತಿತ್ತು. ಸ್ವಾಮಿ ವಿರಜಾನಂದರಿಗಂತೂ ಅಳು ಬರುವಂತಾಯಿತು.

ನಾಗಮಹಾಶಯರ ಮನೆಯಲ್ಲಿ ಕಿಟಕಿ-ಬಾಗಿಲುಗಳಿದ್ದ ಒಳ್ಳೆಯ ಕೊಠಡಿಯಿದ್ದುದು ಅದೊಂದೇ. ಅದನ್ನೇ ಸಂನ್ಯಾಸಿಗಳಿಬ್ಬರಿಗೂ ಮಲಗಲು ಬಿಟ್ಟುಕೊಡಲಾಗಿತ್ತು. ಮಾರನೇ ದಿನ ಅವರಿಬ್ಬರಿಗೂ ತಿಳಿದು ಬಂದದ್ದೇನೆಂದರೆ, ನಾಗಮಹಾಶಯರ ಪತ್ನಿಯವರು ಇಕ್ಕಟ್ಟಾದ ಮುರುಕಲು ಅಡಿಗೆಮನೆಯಲ್ಲಿ ಮಲಗಿದ್ದರು, ಮತ್ತು ನಾಗ ಮಹಾಶಯರು ಎಲ್ಲರೂ ಮಲಗಿದ ನಂತರ ಶಾಸ್ತ್ರಕ್ಕೆ ಮಾತ್ರ ಸ್ವಲ್ಪ ಉಂಡು, ಹೊರಗಿನ ಕೈಸಾಲೆಯ ಒಂದು ಮೂಲೆಯಲ್ಲಿ ಆ ಚಳಿಗಾಲದ ರಾತ್ರಿ, ನೂರಾರು ತೂತುಗಳಿರುವ ಒಂದು ಮಲಿನ ರಜಾಯಿಯನ್ನು ಹೊದೆದು, ಮುದುರಿಕೊಂಡು ಮಲಗಿದ್ದರು ಎಂದು. (ಹಾಸಿಗೆ ಹೊದಿಕೆ ಏನೇನಿತ್ತೋ ಅದನ್ನೆಲ್ಲ ಸಾಧುಗಳಿಗೆ ಮತ್ತು ಭಕ್ತರಿಗೆ ಕೊಟ್ಟುಬಿಟ್ಟಿದ್ದರು.)

ಮಾರನೇ ದಿನವೂ ಹಿಂದಿನ ದಿನದಂತೆಯೇ ಭೋಜನಾದಿಗಳ ವ್ಯವಸ್ಥೆಯಾಗುತ್ತಿದೆ ಎಂಬುದನ್ನು ಗಮನಿಸಿದ ಸ್ವಾಮಿ ವಿರಜಾನಂದರು ಹೆದರಿದರು. ಅವರು ಸ್ವಾಮಿ ಪ್ರಕಾಶಾನಂದರಿಗೆ, ''ಸಾಕಿನ್ನು ನಡೆ, ಇಲ್ಲಿಂದ ಕಾಲುಕೀಳೋಣ'' ಎಂದರು. ಆದರೆ ನಾಗಮಹಾಶಯರು ಏನು ಮಾಡಿದರೂ ಬಿಡಲೊಲ್ಲರು. ಢಾಕಾದಲ್ಲಿ ತುಂಬ ಕೆಲಸಗಳಿವೆ ಎಂದೆಲ್ಲಾ ಹೇಳಿ, ಸಂಜೆಯ ರೈಲಿಗೆ ಹೊರಡಲು ಬಹಳ ಕಷ್ಟದಿಂದ ಸಮ್ಮತಿ ಪಡೆದರು. ಬೇಡ ಬೇಡವೆಂದರೂ ನಾಗಮಹಾಶಯರು ಇವರುಗಳನ್ನು ಬಿಟ್ಟುಬರಲು ಎರಡು ಮೈಲಿ ದೂರದಲ್ಲಿದ್ದ ರೈಲ್ವೇ ಸ್ಟೇಷನ್ನಿಗೆ ಬಂದರು. ರೈಲಿನಲ್ಲಾದರೋ ತುಂಬ ನೂಕುನುಗ್ಗಲು. ಬೋಗಿಯೊಂದನ್ನು ಹತ್ತುತ್ತಿದ್ದ ಈ ಇಬ್ಬರು ಸಾಧುಗಳನ್ನು ಜನರು ಅಡ್ಡಗಟ್ಟಿ ತಳ್ಳಿಬಿಟ್ಟರು. ಇದನ್ನು ನೋಡಿದ ನಾಗಮಹಾಶಯರು, ''ಅಯ್ಯೋ, ಅಯ್ಯೋ, ಮಹಾಪುರುಷರಿಗೆ ಅವಮಾನವಾಯಿತು, ಮಹಾಪರಾಧವಾಯಿತು; ಹೇ ಪ್ರಭು, ಈ ಅಜ್ಞಾನಿಯ ಅಪರಾಧವನ್ನು ಪರಿಗಣಿಸಬೇಡ, ಇವರನ್ನು ಕ್ಷಮಿಸು'' ಎಂದೆಲ್ಲ ಹೇಳುತ್ತ ಪರಿತಪಿಸತೊಡಗಿದರು. ಬೋಗಿಯಲ್ಲಿದ್ದ ಜನರು ಈ ದೃಶ್ಯವನ್ನು ಕಂಡು ಭಯದಿಂದಲೂ, ಪಶ್ಚಾತ್ತಾಪದಿಂದಲೂ ಕುಗ್ಗಿಹೋದರು. ತಮ್ಮ ಅಪರಾಧಕ್ಕಾಗಿ ಕ್ಷಮೆ ಕೇಳುತ್ತ, ಇಬ್ಬರನ್ನೂ ಒಳಗೆ ಕರೆದು, ತಾವುಗಳು ಇಕ್ಕಟ್ಟಿನಲ್ಲಿ ನಿಂತು, ಇಬ್ಬರಿಗೋಸ್ಕರ ಅರ್ಧ ಬೆಂಚನ್ನು ಖಾಲಿ ಮಾಡಿಕೊಟ್ಟರು. ಹರಿದ ಹಾಗೂ ಮಲಿನ ವಸ್ತ್ರವನ್ನು ಧರಿಸಿದ್ದ, ಭಿಕಾರಿಯಂತೆ ಕಂಡುಬರುತ್ತಿದ್ದ ನಾಗಮಹಾಶಯರ ಅಧ್ಯಾತ್ಮ ಪ್ರಭಾವವನ್ನು ಕಂಡ ಸ್ವಾಮಿ ವಿರಜಾನಂದರು ಮಂತ್ರಮುಗ್ಧರಾದರು. ಇದಕ್ಕೂ ಮೊದಲು ಸ್ವಾಮಿ ವಿರಜಾನಂದರು ನಾಗ

ಮಹಾಶಯರನ್ನು ಹಲವು ಬಾರಿ ಮಠದಲ್ಲೂ, ಕಾಂಕೂರ್‌ಗಾಛಿ ಯೋಗೋದ್ಯಾನದಲ್ಲೂ ನೋಡಿದ್ದರು.

ಪೂರ್ವ ಬಂಗಾಳದ ಪ್ರಚಾರ ಕಾರ್ಯದಿಂದ ಮರಳಿ ಬಂದ ಸ್ವಾಮಿ ವಿರಜಾನಂದರು, ಮತ್ತೆ ಮೇ ೨೪ರಿಂದ ಸ್ವಾಮೀಜಿಯವರ ಸೇವೆಯಲ್ಲಿ ನಿರತರಾದರು. ಇವರು ಪೂರ್ವ ಬಂಗಾಳದಲ್ಲಿದ್ದಾಗ ಭಗವಾನ್ ಶ್ರೀರಾಮಕೃಷ್ಣರ ಅಂತರಂಗ ಶಿಷ್ಯರಲ್ಲಿ ಒಬ್ಬರಾದ ಸ್ವಾಮಿ ಯೋಗಾನಂದರು ದೇಹತ್ಯಾಗ ಮಾಡಿರುವ (೨೮ನೇ ಮಾರ್ಚ್ ೧೮೯೯ರಂದು) ದುಃಖದ ವಾರ್ತೆಯನ್ನು ಕೇಳಿದರು. ಮಠಕ್ಕೆ ಹಿಂತಿರುಗಿದ ಸ್ವಾಮಿ ವಿರಜಾನಂದರಿಗೆ ಅವರ ನೆನಪು ಬಹಳ ಕಾಡತೊಡಗಿತು. ಅವರು ಎಷ್ಟೊಂದು ಪ್ರೀತಿಯನ್ನು ತೋರಿಸುತ್ತಿದ್ದರು! ತಾನು ಶ್ರೀಮಾತೆಯವರಿಂದ ಮಂತ್ರ ದೀಕ್ಷೆಯನ್ನು ಪಡೆಯುವ ಸುಯೋಗವನ್ನು ಒದಗಿಸಿಕೊಟ್ಟದ್ದೂ ಅವರೇ ಅಲ್ಲವೆ? ಅವರ ಅಂತಿಮ ದರ್ಶನ ಆಗಲೇ ಇಲ್ಲವಲ್ಲ!

ಸ್ವಾಮೀಜಿಯವರ ದೇಹಾರೋಗ್ಯ ತುಂಬ ಕೆಟ್ಟುಹೋದದ್ದರಿಂದ, ಅವರು ಆರೋಗ್ಯ ಸುಧಾರಣೆಗಾಗಿ ಕೊಲ್ಕತ್ತದಲ್ಲಿ ಬಲರಾಮ ಬಾಬುವಿನ ಮನೆಯಲ್ಲಿದ್ದರು. ಅವರ ಆರೋಗ್ಯ ಸುಧಾರಿಸುವುದಕ್ಕಾಗಿ ಸಮುದ್ರಯಾನ ಮಾಡಬೇಕೆಂದು ವೈದ್ಯರು ಸಲಹೆಯಿತ್ತರು. ಆದ್ದರಿಂದ, ಸ್ವಾಮೀಜಿಯವರು ಎರಡನೇ ಬಾರಿ ಅಮೇರಿಕಾಗೆ ಹೋಗುವುದೆಂದು ನಿರ್ಧರಿಸಿದರು. ಸ್ವಾಮಿ ವಿರಜಾನಂದರು ಇದಕ್ಕೂ ಮೊದಲು ಕೆಲವು ತಿಂಗಳು ಸ್ವಾಮೀಜಿಯವರ ಸೇವೆಯನ್ನು ಮಾಡಿದ್ದರು. ಮೊದಮೊದಲು ಈ ಕೆಲಸ ಮಾಡಲು ಅವರಿಗೆ ಬಹಳ ಆತಂಕವಾಗುತ್ತಿತ್ತು. ಶರತ್ ಮಹಾರಾಜರು ಸ್ವಾಮೀಜಿಯವರ ಸೇವೆಯ ಭಾರವನ್ನು ಅವರಿಗೆ ವಹಿಸಬೇಕೆಂದಿದ್ದಾಗ, ಕಾಳೀಕೃಷ್ಣರು, ''ಮಹಾರಾಜ್, ನನಗೆ ಬೇರೆ ಯಾವುದಾದರೂ ಕೆಲಸ ಕೊಡಿ, ಮಾಡುತ್ತೇನೆ, ಆದರೆ ಆ ಕೆಲಸವೊಂದನ್ನು ಮಾತ್ರ ಕೊಡಬೇಡಿ. ನಾನು ತಪ್ಪೇನಾದರೂ ಮಾಡಿದರೆ ಅದರಿಂದ ಸ್ವಾಮೀಜಿಯವರಿಗೆ ಅದೆಷ್ಟು ತೊಂದರೆಯಾಗುವುದೋ ಏನೋ'' ಎಂದು ವಿನಂತಿಸಿಕೊಂಡಿದ್ದರು. ಅದಕ್ಕೆ ಶರತ್ ಮಹಾರಾಜರು ಸ್ವಾಮಿ ವಿರಜಾನಂದರಿಗೆ ಭರವಸೆ ನೀಡುತ್ತ, ''ನೀನೇನೂ ಭಯಪಡುವ ಆವಶ್ಯಕತೆಯಿಲ್ಲ. ನಾನೇ ನಿಂತು ನಿನಗೆಲ್ಲವನ್ನೂ ತೋರಿಸಿಕೊಡುತ್ತೇನೆ'' ಎಂದಿದ್ದರು. ಆ ಬಳಿಕವೇ ಕಾಳೀಕೃಷ್ಣರು ಅದಕ್ಕೆ ಒಪ್ಪಿಕೊಂಡರು. ಸೇವೆಯನ್ನು ಆರಂಭಿಸಿದ ನಂತರ ಕ್ರಮೇಣ ಆತಂಕ ಕರಗಿಹೋಯಿತು. ಸ್ವಾಮೀಜಿ ಕೂಡ ಅವರ ಸೇವೆಯನ್ನು ಮೆಚ್ಚುತ್ತಿದ್ದರು. ೧

ಬಲರಾಮಬಾಬುವಿನ ಮನೆಯಲ್ಲಿದ್ದಾಗ ಸ್ವಾಮೀಜಿಯವರ ಮಧುಮೇಹ ಕಾಯಿಲೆ (ಡಯಾಬಿಟಿಸ್) ತುಂಬ ಉಲ್ಬಣಿಸಿತ್ತು. ರಾತ್ರಿಯ ವೇಳೆ ಅವರಿಗೆ ಯಾವಾಗ ಏನು ಅಗತ್ಯ ಬೀಳುವುದೋ ಎಂಬ ಯೋಚನೆಯಿಂದಾಗಿ ಒಂದು ರೀತಿಯ ಆತಂಕ ಇರುತ್ತಿದ್ದುದರಿಂದ, ಮಲಗಿದರೂ ಕಾಳೀಕೃಷ್ಣರಿಗೆ ನಿದ್ರೆ ಬರುತ್ತಿರಲಿಲ್ಲ. ಹಗಲುಹೊತ್ತು ಸ್ವಾಮೀಜಿಯವರಿಗಾಗಿ ಅಡಿಗೆ ಹಾಗೂ ಸೇವೆಯ ಇತರ ಕೆಲಸಗಳಿಂದಾಗಿ ಒಂದು ನಿಮಿಷವೂ ವಿಶ್ರಾಂತಿ ಸಿಗುತ್ತಿರಲಿಲ್ಲ. ಆದರೆ ಏನಾಶ್ಚರ್ಯ! ಅವರಿಗೆ ಒಂದಿಷ್ಟೂ ಆಯಾಸವೆನಿಸುತ್ತಿರಲಿಲ್ಲ ; ಸೇವೆಯ ಆನಂದದಲ್ಲಿ ತುಂಬಿಹೋಗಿರುತ್ತಿದ್ದರು. ಆಗ ಸ್ವಾಮಿ ತುರೀಯಾನಂದರೂ ಸಹ ಬಲರಾಮಬಾಬುಗಳ ಮನೆಯಲ್ಲಿದ್ದರು; ಒಂದೇ ಕೋಣೆಯಲ್ಲಿ ಇಬ್ಬರೂ ಮಲಗುತ್ತಿದ್ದರು. ಕಾಳೀಕೃಷ್ಣರನ್ನು ಗಮನಿಸಿದ ಅವರು ಒಂದು ದಿನ ಕೇಳಿದರು, ''ಏನೋ ಕಾಳೀಕೃಷ್ಣ, ನೀನು ರಾತ್ರಿ ಮಲಗುವುದಿಲ್ಲವೆ?'' ಅದಕ್ಕವರು, ''ಇಲ್ಲ, ನಿದ್ರೆ ಬರುವುದಿಲ್ಲ'' ಎಂದರು. ''ಆಯಾಸವೆನಿಸುವುದಿಲ್ಲವೆ?'' ಎಂದುದಕ್ಕೆ ''ಏಕೆ? ಇಲ್ಲವಲ್ಲ?'' ಎಂದಿದ್ದರು.

ಸ್ವಾಮೀಜಿ ಅಮೇರಿಕಾಗೆ ಹೋಗುವ ದಿನಗಳು ಹತ್ತಿರವಾಗುತ್ತಿದ್ದಂತೆಯೇ ಮಠದಲ್ಲಿ ಮತ್ತು ಕೊಲ್ಕತ್ತೆಯಲ್ಲಿ ಸಾಧು-ಭಕ್ತ-ಬಂಧುಗಳಲ್ಲಿ ತುಮುಲವೆದ್ದಿತು. ಅವರು ಯಾವಾಗ ಹಿಂದಿರುಗುವರೆಂಬುದು ಅನಿಶ್ಚಿತವಾಗಿದ್ದುದರಿಂದ ಎಲ್ಲರೂ ಕೂಡ ಆದಷ್ಟೂ ಅವರ ಜೊತೆಯಲ್ಲಿರಲು ತವಕಪಡುತ್ತಿದ್ದರು. ಸ್ವಾಮೀಜಿಯವರ ದೇಹ ದುರ್ಬಲವಾಗಿದ್ದರೂ, ಅವರಿಗೆ ದಣಿವಿರಲಿಲ್ಲ. ಅವರು ಅವಿಶ್ರಾಂತವಾಗಿ ಸಂಘದ ಆದರ್ಶ ಮತ್ತು ಕಾರ್ಯ ಪ್ರಣಾಳಿಯ ಬಗ್ಗೆ ವಿಚಾರ ಮಾಡುತ್ತಿದ್ದರು. ಎಲ್ಲರಿಗೂ ಉಪದೇಶ, ಪ್ರೋತ್ಸಾಹ ಮತ್ತು ಸ್ಫೂರ್ತಿ ನೀಡುತ್ತಿದ್ದರು.

ಸ್ವಾಮೀಜಿಯವರು ಬಲರಾಮಬಸುಗಳ ಮನೆಯಿಂದ ಆಗಾಗ ಮಠಕ್ಕೆ ಹೋಗುತ್ತಿದ್ದರು. ಆಗೆಲ್ಲಾ ಕಾಳೀಕೃಷ್ಣರೂ ಸಹ ಜೊತೆಗಿರುತ್ತಿದ್ದರು. ೧೮೯೯ರ ಜೂನ್ ೧೭ರಂದು ಸ್ವಾಮೀಜಿ ದೇವರ ಮನೆಯಲ್ಲಿ ಬಹಳ ಹೊತ್ತು ಶಿವ, ಕಾಳಿ ಮುಂತಾದ ದೇವ, ದೇವಿಯರ ಭಜನೆಗಳನ್ನು ಹಾಡುತ್ತ ತನ್ಮಯರಾಗಿದ್ದರು. ಈ ದೃಶ್ಯ ಕಾಳೀಕೃಷ್ಣರ ಮನದಲ್ಲಿ ಆಳವಾಗಿ ಅಚ್ಚೊತ್ತಿ ನಿಂತಿತ್ತು.

---

೧ ಮಠದಲ್ಲೊಮ್ಮೆ ಕಾಳೀಕೃಷ್ಣರು ಸ್ವಾಮೀಜಿಯವರಿಗೆ ಸ್ನಾನ ಮಾಡಿಸುತ್ತಿದ್ದಾಗ ಅವರು ಕಾಳೀಕೃಷ್ಣನನ್ನು ಬಹಳ ಸ್ನೇಹದಿಂದ, ''ನೀನು ತ್ರೈಲೋಕ್ಯ ಬೋಸರ ಮಗನೇನು? ನನಗೆ ತಿಳಿದಿರಲಿಲ್ಲ! ನನ್ನ ತಾಯಿ ಹಾಗೆಂದು ಹೇಳಿದರು. ನಾನು ಚಿಕ್ಕವನಿದ್ದಾಗ ಆಟವಾಡಲೆಂದು ನಿಮ್ಮ ಮನೆಗೆ ಬಹಳ ಬರುತ್ತಿದ್ದೆ'' ಎಂದರು. ಕಾಳೀಕೃಷ್ಣರ ನಾಲ್ಕನೇ ಚಿಕ್ಕಪ್ಪನಾದ ಅಮೃತಲಾಲ್ ಬಸುರವರು ಸ್ವಾಮೀಜಿಯವರ ಸಹಪಾಠಿಗಳಾಗಿದ್ದರು. ಸ್ವಾಮೀಜಿಯವರ ಜೀವನ ಚರಿತ್ರೆ ಓದಿದವರಿಗೆ, ಅವರ ಬಾಲ್ಯದ ಚೇಷ್ಟೆಗಳಲ್ಲೊಂದಾದ ಸಂಪಿಗೆ ಮರಕ್ಕೆ ನೇತಾಡುವ ಸಾಹಸ ನೆನಪಿದ್ದೇ ಇರುತ್ತದೆ. ಅದೇ ರಸ್ತೆಯಲ್ಲಿದ್ದ ಒಂದು ಸಂಪಿಗೆ ಮರಕ್ಕೆ ತಮ್ಮ ಸ್ನೇಹಿತರೊಂದಿಗೆ ಹೋಗಿ, ತಲೆಕೆಳಗಾಗಿ ಜೋತಾಡುತ್ತಿದ್ದರು. ಆ ಮರದ ಮಾಲೀಕರಾದ ವೃದ್ಧರು ಎಂದಾದರೊಂದು ದಿನ ಅನಾಹುತ ತಪ್ಪಿದ್ದಲ್ಲ ಎಂದು ಚಿಂತಿಸಿ, ''ಸಂಪಿಗೆ ಮರದಲ್ಲಿ ಬ್ರಹ್ಮದೈತ್ಯವಿದೆ, ಹತ್ತಬೇಡಿ. ಕತ್ತನ್ನು ಮುರಿದು ಹಾಕುತ್ತದೆ'' ಎಂದು ಹೇಳಿ ಬಾಲಕರನ್ನು ಹೆದರಿಸಿ ಓಡಿಸಲು ಪ್ರಯತ್ನಿಸುತ್ತಿದ್ದರು. ಬೇರೆ ಹುಡುಗರೆಲ್ಲರೂ ಭಯಪಡುತ್ತಿದ್ದುದನ್ನು ಕಂಡು ಬಿಲೆಯು (ಸ್ವಾಮೀಜಿಯವರನ್ನು ಮುದ್ದಿನಿಂದ ಹಾಗೆ ಕರೆಯುತ್ತಿದ್ದರು. ಇದು 'ವೀರೇಶ್ವರ' ಹೆಸರಿನ ಅಪಭ್ರಂಶ), ''ಅಯ್ಯೋ, ಆ ಮುದುಕನ ಮಾತನ್ನೇಕೆ ಕೇಳುತ್ತೀರಾ? ನಿಜವಾಗಿ ಬ್ರಹ್ಮದೈತ್ಯವಿದ್ದಿದ್ದರೆ ಇಷ್ಟು ಹೊತ್ತಿಗಾಗಲೇ ನಮ್ಮ ಕತ್ತನ್ನು ಮುರಿದುಹಾಕುತ್ತಿತ್ತು'' ಎಂದು ಹೇಳಿ ಮತ್ತೆ ಆಟಕ್ಕೆ ತೊಡಗಿದ. ಈ ಘಟನೆಯಲ್ಲಿ ಬಂದಿರುವ ವೃದ್ಧರೇ ಕಾಳೀಕೃಷ್ಣನ ತಾತನಾದ ರಾಮರತನ ಬಸು.



ಸ್ವಾಮೀಜಿ ಹಾಗೂ ಇತರರೊಂದಿಗೆ ಸ್ವಾಮಿ ವಿರಜಾನಂದರು

ಇದಾದ ಎರಡು ದಿನಗಳ ನಂತರ ಅಂದರೆ ಜೂನ್ ೧೮ರಂದು ಸಂಜೆ ಸ್ವಾಮೀಜಿಯವರ ಜೊತೆಯಲ್ಲಿ ಒಂದು ಗ್ರೂಪ್ ಫೋಟೋ ತೆಗೆಯಲಾಯಿತು. ಸ್ವಾಮೀಜಿ ಅಡಿಗೆಯ ಕೆಲಸದಲ್ಲಿ ನಿರತರಾಗಿದ್ದ ಕಾಳೀಕೃಷ್ಣರನ್ನು ಫೋಟೋಗಾಗಿ ಕರೆದಾಗ ಅವರು ಯಾವ ಅವಸ್ಥೆಯಲ್ಲಿದ್ದರೋ ಹಾಗೆಯೇ ಓಡಿಬಂದರು; ಮೇಲಂಗಿ ಹಾಕಿಕೊಳ್ಳಲೂ ಸಮಯವಿರಲಿಲ್ಲ. ಫೋಟೋ ತೆಗೆದ ನಂತರ ಮತ್ತೆ ಕೆಲಸಕ್ಕೆ ಹಿಂತಿರುಗುತ್ತಿದ್ದಾಗ ಇದ್ದಕ್ಕಿದ್ದಂತೆಯೇ ದುಃಖ ಉಮ್ಮಳಿಸಿ ಬಂದು ಕಣ್ಣುಗಳಲ್ಲಿ ನೀರಿಳಿಯತೊಡಗಿತು. ಗುರು ಸೇವೆಯ ಈ ದುರ್ಲಭವಾದ ಸೌಭಾಗ್ಯ ಇನ್ನೊಂದು ದಿನದಲ್ಲೇ ಕೊನೆಗೊಳ್ಳುವುದರಲ್ಲಿದೆ — ಎಂದು.

ಸ್ವಾಮೀಜಿ ಮತ್ತು ಹರಿ ಮಹಾರಾಜರಿಗೆ (ಇವರೂ ಸಹ ಸ್ವಾಮೀಜಿ ಜೊತೆಗೆ ಅಮೆರಿಕಾಗೆ ಹೋಗುವವರಿದ್ದರು) ಮಠದ ನಿವಾಸಿಗಳೆಲ್ಲರೂ ವಿದಾಯ, ಅಭಿನಂದನೆ ಸಲ್ಲಿಸಲು ಅಂದು ರಾತ್ರಿ ಸಭೆ ಸೇರಿದ್ದರು. ಶರತ್ ಮಹಾರಾಜರು ಸಭೆಯ ಉದ್ಘಾಟನೆ ಮಾಡಿದರು. ಸ್ವಾಮಿ ಅಖಂಡಾನಂದರು ಮತ್ತು ಸ್ವಾಮಿ ತ್ರಿಗುಣಾತೀತಾನಂದರು ಸ್ವಲ್ಪ ಹೊತ್ತು ಮಾತನಾಡಿದರು. ಹರಿ ಮಹಾರಾಜರ ಸಂಕ್ಷಿಪ್ತ ಭಾಷಣದ ಬಳಿಕ ಸ್ವಾಮೀಜಿಯವರಿಂದ, ವಿದಾಯದ ಪ್ರಯುಕ್ತ ಬೆಂಕಿಯಂತಹ ನುಡಿಗಳು ಮೊಳಗಿದವು:

''...ಸಂಕ್ಷಿಪ್ತವಾಗಿ ಹೇಳುವುದಾದರೆ, ಸಂನ್ಯಾಸವೆಂದರೆ ಮೃತ್ಯುವನ್ನು ಪ್ರೀತಿಸುವುದು ಎಂದರ್ಥ. ಹಾಗೆಂದ ಮಾತ್ರಕ್ಕೆ ಇದು ಆತ್ಮಹತ್ಯೆಯೇನಲ್ಲ. ಒಂದಲ್ಲ ಒಂದು ದಿನ ಮರಣವು ನಿಶ್ಚಿತವೆಂದು ಅರಿತು, ಇತರರ ಒಳಿತಿಗಾಗಿ ತನ್ನ ಸರ್ವಸ್ವವನ್ನೂ ಸರ್ವಪ್ರಕಾರದಿಂದಲೂ ಕಣಕಣವಾಗಿ ಸಮರ್ಪಿಸಿಕೊಳ್ಳುವುದು.. ಇಡೀ ಭೂಮಂಡಲವು ಒಂದು ಅಖಂಡ ಅಸ್ತಿತ್ವ. ನೀನು ಈ ಸಮಗ್ರ ವಿಶ್ವದ ಒಂದು ನಗಣ್ಯ ಕಣವಷ್ಟೆ. ಆದ್ದರಿಂದ ನಿನ್ನ ಕ್ಷುದ್ರ ಅಹಂಕಾರವನ್ನು ಬೆಳೆಸುವ ಪ್ರಯತ್ನ ಮಾಡದೆ, ಅದನ್ನು ಮನುಕುಲದ ಸೇವೆಗಾಗಿ ವಿನಿಯೋಗಿಸು. ಗಭೀರ ಭಾವಪೂರ್ಣತೆಯೊಂದಿಗೆ ಪ್ರಚಂಡವಾದ ಕಾರ್ಯತತ್ಪರತೆಯ ಸಮನ್ವಯ, ನಿಜವಾದ ಪುರುಷ-ಶಕ್ತಿಯ ಜೊತೆಜೊತೆಗೇ ನಾರೀಹೃದಯದ ಕೋಮಲತೆ....''

ಮರುದಿನ (ಜೂನ್ ೨೦) ಸ್ವಾಮೀಜಿಯವರು ಹೊರಡುವ ದಿನ. ಶ್ರೀಮಾತೆಯವರು ಆಗ ಕೊಲ್ಕತ್ತೆಯ ಬಾಗ್‌ಬಜಾರಿನ ಬೋಸ್‌ಪಾರಾ ಲೇನಿನಲ್ಲಿದ್ದರು. ಶ್ರೀಮಾತೆಯವರು ಸ್ವಾಮೀಜಿ ಹಾಗೂ ಉಳಿದ ಎಲ್ಲ ಸಂನ್ಯಾಸಿಗಳನ್ನೂ ಮಧ್ಯಾಹ್ನದ ಭೋಜನಕ್ಕೆ ಆಹ್ವಾನಿಸಿದ್ದರು. ಎಲ್ಲರೂ ಎರಡು ದೊಡ್ಡ ನೌಕೆಯನ್ನು ಮಾಡಿಕೊಂಡು ಬಾಗ್‌ಬಜಾರಿಗೆ ಹೊರಟರು. ಶ್ರೀಮಾತೆ ಅಂದು ಎಲ್ಲರಿಗೂ ಸಂತೃಪ್ತಿಯಾಗುವಂತೆ ಅತ್ಯಂತ ಪ್ರೀತಿಯಿಂದ ಉಣಬಡಿಸಿದರು. ಸಂಜೆ ೩ ಗಂಟೆಯ ಹೊತ್ತಿಗೆ ಕಾಳೀಕೃಷ್ಣರೂ ಸಹ ಎಲ್ಲರೊಂದಿಗೆ ಸ್ವಾಮೀಜಿಯವರಿಗೆ ವಿದಾಯ ಹೇಳಲು ಪ್ರಿನ್ಸೆಸ್ ಘಾಟ್‌ಗೆ ಹೋದರು. ಸ್ವಾಮೀಜಿ, ಹರಿ ಮಹಾರಾಜರು, ಸೋದರಿ ನಿವೇದಿತಾ ಮತ್ತು ಶರತ್ ಮಹಾರಾಜರ ಒಬ್ಬ ತಮ್ಮ — ಈ ನಾಲ್ವರೂ ಒಟ್ಟಿಗೆ ಮೊದಲ ಬಾರಿ ಲಂಡನ್ನಿಗೆ ಹೋಗುವವರಿದ್ದರು. ಎಲ್ಲರ ಹೃದಯದಲ್ಲೂ ನೋವಿನ ರಾಗ ಮಿಡಿಯುತ್ತಿತ್ತು. ಆದರೆ ಸ್ವಾಮೀಜಿ ಮಾತ್ರ ಎಲ್ಲರೊಂದಿಗೆ ವಿನೋದಿಸುತ್ತ, ಉತ್ಸಾಹವನ್ನು ತುಂಬುತ್ತಿದ್ದರು.

೯

೧೮೯೯ರ ಶ್ರಾವಣದ ಸಂಜೆ. ಹಿಮಾಲಯದ ದಟ್ಟ ಅರಣ್ಯ ಪ್ರದೇಶದಲ್ಲಿರುವ ಒಂದು ಸಣ್ಣ , ಹಳೆಯ, ಬೆಟ್ಟದ ಮನೆಯಲ್ಲಿ ಮೂವರು ವ್ಯಕ್ತಿಗಳು ಮಾತುಕತೆಯಾಡುತ್ತಿದ್ದಾರೆ. ಅವರಲ್ಲಿ ಇಬ್ಬರು ವೃದ್ಧ ಆಂಗ್ಲ ದಂಪತಿಗಳು; ಮತ್ತೊಬ್ಬರು ಗೈರಿಕ ವಸನಧಾರಿಯಾದ ಭಾರತೀಯ ಸಂನ್ಯಾಸಿ. ಆಕಾಶದಲ್ಲಿ ಕಾರ್ಮೋಡ ಕವಿದು ಕ್ರಮೇಣ ಕತ್ತಲಾವರಿಸುತ್ತದೆ. ಸಣ್ಣಗೆ ಮಳೆಹನಿ ಬೀಳಲಾರಂಭಿಸಿದ್ದನ್ನು ಕಂಡು ಇಂಗ್ಲಿಷಿನವನು ಸಂನ್ಯಾಸಿಯ ಕಡೆಗೆ ತಿರುಗಿ, ''ಸ್ವರೂಪ್, ಏನೋ ತೊಂದರೆ ಸಂಭವಿಸಿರಬಹುದು'' ಎಂದನು.

ಅಲ್ಲಿದ್ದ ಮಹಿಳೆಯ ಮುಖದಲ್ಲಿ ಚಿಂತೆಯ ಗೆರೆ ಮೂಡಿತು. ''ಇದು ಬಹಳ ಆತಂಕದ ವಿಷಯವೇ. ಈ ಬಿರುಗಾಳಿ, ಮಳೆಯ ಹೊತ್ತಿಗೆ ಅವರು ಇಲ್ಲಿಗೆ ಹೇಗೆ ತಾನೇ ಬಂದು ತಲುಪಿಯಾರು?'' ಎಂದು ಉದ್ಗರಿಸಿದಳು.

ಸ್ವರೂಪರು ಏನೋ ಹೇಳಬೇಕೆಂದಿರುವಷ್ಟರಲ್ಲೇ ಪಾಹಾಡೀ ಸೇವಕನೊಬ್ಬ ಬಾಗಿಲ ಬಳಿಗೆ ಓಡಿಬಂದು ಉತ್ಸಾಹದಿಂದ ಹೇಳಿದ, ''ಆಗಯೇ ಸ್ವಾಮಜು'' (ಬಂದುಬಿಟ್ಟಿದ್ದಾರೆ ಸ್ವಾಮೀಜಿ).

ಸ್ವರೂಪರು ಸರಸರನೆ ಹೊರಗೆ ಧಾವಿಸಿ ಕಾತರತೆಯಿಂದ ಪ್ರಶ್ನಿಸಿದರು, ''ಆಗಯೇ? ಕಿತನೀ ದೂರ್'' (ಬಂದಿದ್ದಾರೇನು? ಇನ್ನೂ ಎಷ್ಟು ದೂರದಲ್ಲಿದ್ದಾರೆ?), ''ನಜಿದೀಕ್, ಕುಲ್ ದೋ ಆಯೇ'' (ಹತ್ತಿರವೇ, ಇಬ್ಬರು ಮಾತ್ರ ಬಂದಿದ್ದಾರೆ), ''ಇಬ್ಬರು ಮಾತ್ರವೆ?'' ಎಂದು ಹೇಳುತ್ತಾ ಸ್ವರೂಪರು ಹೊರಗೆ ಬಂದು, ಉದ್ವಿಗ್ನರಾಗಿ ಮನೆಯ ಮುಂದಿನ ರಸ್ತೆಯಲ್ಲಿ ಮುನ್ನಡೆದರು. ವಯಸ್ಕ ದಂಪತಿಗಳೂ ಸಹ ಬಾಗಿಲಿಗೆ ಬಂದು ನಿಂತರು.

*(ಮುಂದುವರಿಯುವುದು)*